ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಅಗ್ನಿಸಾಕ್ಷಿಯಾಗಿ ಮದುವೆಯಾಗಿದ್ದರೂ ಕೋರ್ಟಿನಲ್ಲಿ ಸಾಕ್ಷಿ ಹೇಳಲು ಅಗ್ನಿ ಏಕೆ ಬರುವುದಿಲ್ಲ?




ಬರುತ್ತದಲ್ಲ. ವಿಚ್ಛೇದನಬದ್ದರಲ್ಲಿ ಕಾವಿನ ಝಳವಾಗಿ ವಿಜೃಂಭಿಸುತ್ತಿರುತ್ತದೆ.

ಪಿ. ಜಯವಂತ ಪೈ, ಕುಂದಾಪುರ

ಪುಂಡನಿಗೂ, ಪುಢಾರಿಗೂ ವ್ಯತ್ಯಾಸವೇನು?

ಪುಢಾರಿ ಊರ್ಧ್ವಮುಖಿ; ಪುಂಡ ಅಲ್ಲೋಲಕಲ್ಲೋಲಿ.

ಮಲ್ಲಿಕಾರ್ಜುನ, ಸುರಧೇನುಪುರ

ಮಾತು ಬಲ್ಲವರು ಬರಗಾಲದಲ್ಲೂ ಬದುಕುತ್ತಾರೆ. ಓದು ಬಲ್ಲವರು?

ಬರಹ ಇರುವಷ್ಟು ಕಾಲವೂ ಬದುಕುತ್ತಾರೆ.

ಕಾಳಿಹುಂಡಿ ಶಿವಕುಮಾರ್, ಮೈಸೂರು

ಒಲವಿನ ಪ್ರಿಯಲತೆ ಅವಳದೇ ಚಿಂತೆ ಎಂದು ಇಲ್ಲೊಬ್ಬ ಹಾಡುತ್ತಿರುತ್ತಾನಲ್ಲ?




ಅದು 'ಕವಳದ್ದೇ ಚಿಂತೆ' ಅಂತೆ. ವೀಳ್ಯದೆಲೆಯ ಲತೆಯೆಂದರೆ ಅವನಿಗೆ ಪ್ರಿಯವಂತೆ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಹಿಂದಿನ ಕವಿಗಳು ಪ್ರಕೃತಿ, ಹೆಣ್ಣು, ದೈವಭಕ್ತಿಗಳನ್ನು ಬಣ್ಣಿಸುತ್ತಿದ್ದರು. ಈಗಿನ ಯುವಕವಿಗಳು ಏನನ್ನು ಬಣ್ಣಿಸಬೇಕು?

ಹೆಣ್ಣನ್ನೇ – ಅದಕ್ಕೆ ಸಿಗುವಷ್ಟು ಲೈಕ್ಸ್, ಕಾಮೆಂಟ್ಸ್ ಮಿಕ್ಕವಕ್ಕಿಲ್ಲ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಜಗತ್ತಿನಲ್ಲಿ ಎಲ್ಲದಕ್ಕೂ ಸ್ಪರ್ಧೆ ಇದೆ. ಆದರೆ ಸಾವಿಗಾಗಿ ಏಕಿಲ್ಲ ಸಾರ್?

ಕೊರೊನಾ ಸಮಯದಲ್ಲಿ ಚಿಕ್ಕವರೂ ವೃದ್ಧರನ್ನು ಹಿಂದಿಕ್ಕಿ ಹೋದರಲ್ಲ.

ಸಿ.ಕೆ. ಗಣಪ್ಪನವರ, ಮುಂಡರಗಿ

ಲೋಕಸಭಾ ಚುನಾವಣೆಯಲ್ಲಿ ಬಿಸಿಲಿನ ಬೇಗೆ ಅಭ್ಯರ್ಥಿಗಳಿಗೆ ತಟ್ಟಲಿಲ್ಲವೆ?

ಊಹೂಂ. ಚುನಾವಣೆಯ ಬೇಗೆಯ ಮುಂದೆ ಸೂರ್ಯ ಮಂಜುಗಡ್ಡೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಕುಡುಕರಿಗೆ ಮತ್ತು ಮದ್ಯಪ್ರಿಯರಿಗೆ ಏನು ವ್ಯತ್ಯಾಸ?

ಮದ್ಯಪ್ರಿಯರು ಡ್ರಿಂಕ್ಸ್ ತೆಗೆದುಕೊಳ್ಳುತ್ತಾರೆ. ಕುಡುಕರನ್ನು ಡ್ರಿಂಕ್ಸ್ ತೆಗೆದುಕೊಳ್ಳುತ್ತದೆ.

ಕೆ.ಎಂ. ವಿಭೂತಿ, ಹರಿಹರ

ಕೈ ಕೆಸರಾಗದೆ ಬಾಯಿ ಮೊಸರಾಗುವ ಕಾಯಕ ಯಾವುದಾದರೂ ಇದೆಯೆ?

ಹೂಂ. ಲಿಸ್ಸಿ ಬಾರ್‌ನಲ್ಲಿ ಟೇಸ್ಟರ್ ಹುದ್ದೆ.

ಶಿವಣ್ಣ ರಾಮಗುಂಡಿ, ಬೈಲಹೊಂಗಲ

ಮಳೆ ಬಂದರೂ, ಬಾರದಿದ್ದರೂ ಚಿಂತಿಸುವವರಿಗೆ ನಿಮ್ಮ ಸಲಹೆ ಏನು?

ಸೊಳ್ಳೆ, ಅತಿವೃಷ್ಟಿಗಳಿಂದ ದೂರಾಗಲು ಕೆರೆಗೆ ಅಂಟಿದಂತಿರುವ ಮನೆ ಬಿಡಿ.

ಬಿ. ನಾಗರಾಜು, ಬೆಂಗಳೂರು

ಅಪ್ಪ ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು. ರಾಜಕಾರಣಿಗಳ ಕೆಸರೆರಚಾಟದಲ್ಲಿ?

ಆ ಸೀನ್‌ಗಳನ್ನೇ ಉಜ್ಜೀ ಉಜ್ಜೀ ಮಾಧ್ಯಮ ಶ್ರೀಮಂತವಾಯ್ತು.

ಎಲ್.ಐ.ಸಿ. ವಿಜೇಂದ್ರ, ಮೈಸೂರು

ದೇವರು ಹೆಣ್ಣಿಗೆ ರೂಪ ಕೊಟ್ಟು, ಗಂಡಿಗೇಕೆ ಮೋಸ ಮಾಡಿದ?

ಅಂತಹ ಮೋಸವೇನಿಲ್ಲ – ಇವನಿಗೆ ರೂಪಾಯಿ ಕೊಟ್ಟನಲ್ಲ.

ಭಾರತೀ ಗಂಗಾಧರ್, ಬೆಂಗಳೂರು

ಇದ್ದಾಗೊಂದು ಮೊಳ ಹೂವು ಕೊಡದವರು ಸತ್ತಾಗ ದೇಹ ಮುಚ್ಚುವಷ್ಟು ಹೂವು ಹಾಕುವರಲ್ಲ?

ಇದ್ದಾಗ ಒಮ್ಮೆ ಕೊಟ್ಟರೆ ಮತ್ತೊಮ್ಮೆ ಕೇಳುವರಲ್ಲ!

## ಬಹುಮಾನಿತ ಪ್ರಶ್ನೆ

ಮಂಡಿ ಕುಮಾರ್, ಬೆಂಗಳೂರು

ಹೆಂಗಸರ ತುಟಿಗೆ ರಂಗು ಏಕೆ?

ರಂಗುರಂಗಿನ ಮಾತುಗಳು ಹೊರಬರಲು ಸೂಕ್ತವಾದ ಚೌಕಟ್ಟು ಇರಲೆಂದು.

ಸಿಹಿಮೊಗೆ ರಮೇಶ್, ಮೈಸೂರು

ಆರೋಪಿಯಾಗಿ ನ್ಯಾಯಾಂಗ ಕಸ್ಟಡಿಗೆ ಹೋದಮೇಲೂ ಕಾವಿ ಧಾರಣೆ ಎಷ್ಟು ಸರಿ?

ಅದು 'ಕಾವಿಗೆ ಶರಣಾದುದಕ್ಕೇ ಈ ಸ್ಥಿತಿ' ಎಂದು ಕಾವಿಧಾರಿಗೆ ಆಗಾಗ್ಗೆ ನೆನಪಿಸಲಂತೆ.

ಎನ್. ವೈದೇಹಿ, ಮೈಸೂರು

ಸಂಸಾರದಲ್ಲಿ ನಡೆಯುವ ಪ್ರತಿ ಅನಾಹುತಕ್ಕೂ ತಾಯಿಯ ಜನ್ಮನಕ್ಷತ್ರವೇ ಕಾರಣವೆ?

ಊಹೂಂ. ಹಾಗೆಂದು ಆರೋಪಿಸುವ ಗ್ರಹಗಳೇ ಕಾರಣ.

ಬಿ. ಚಂದ್ರೇಗೌಡ, ಬೆಂಗಳೂರು

ವಿಶ್ವಾಮಿತ್ರ ಮಹರ್ಷಿಯಾಗಿದ್ದರೂ ಹುಲುಮಾನವನಂತೆ ಹೆಣ್ಣಿನ ಮೋಹಕ್ಕೆ ಸಿಲುಕಿದ್ದು ಏನನ್ನು ಸೂಚಿಸುತ್ತದೆ?




maher sheಯೂ ಹನಿಟ್ರ್ಯಾಪ್ ಆಗುವಾಗ ಹರ್ಷಿಸುತ್ತಾನೆ ಎಂದು.

ವಿ. ಹೇಮಂತಕುಮಾರ್, ಬೆಂಗಳೂರು

ಒಳ್ಳೆಯ ಪುಸ್ತಕಗಳು, ಒಳ್ಳೆಯ ವ್ಯಕ್ತಿಗಳು ಸುಲಭವಾಗಿ ಅರ್ಥವಾಗುವುದಿಲ್ಲ. ಏಕೆ?

ಅಂತಹ ವಿಷಯಗಳು ನಮಗೆ ಬಾಲ್ಯದಿಂದಲೂ ಔಟ್ ಆಫ್ ಸಿಲಬಸ್ ಆಗಿರುತ್ತವಾದ್ದರಿಂದ.

ಶಾಂತ ಡಿ. ಗೌಡ, ಬೆಂಗಳೂರು

'ಇದ್ದದ್ದನ್ನು ಇದ್ದಂತೆ ಹೇಳಿದರೆ ಎದ್ದುಬಂದು ಎದೆಗೆ ಒದ್ದರು' ಎನ್ನುವ ಮಾತು ಯಾರಿಗೆ ಅನ್ವಯಿಸುತ್ತದೆ?

ಕರಾಟೆ ಎಕ್ಸ್‌ಪರ್ಟ್ ಎನಿಸಿಕೊಂಡಿದ್ದ ಬ್ರೂಸ್ಲಿಗೆ.

■ ರಾಮ್